MR. SPEAKER:– Hon. Member cannot question me.

ಶ್ರೀ ವಾಟಾಳ್ ನಾಗರಾಜ್:– ತಾವು ಸರ್ವಾಧಿಕಾರಿಯೆಂದು ಇಲ್ಲಿ ಮಾತನಾಡಬಾರದು. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಪಂಚವಾರ್ಷಿಕ ಯೋಜನೆಗಳಲ್ಲಿ ರಾಜ್ಯದ ಪ್ರಗತಿ ಕುಂಠಿತ

97 (404) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):–

ರಾಜ್ಯ ಯೋಜನಾ ಮತ್ತು ಸಾಂಖ್ಯಿಕ ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಷ್ಟ್ರದ ಪಂಚವಾರ್ಷಿಕ ಯೋಜನೆಗಳಲ್ಲಿ ಮಾಡುತ್ತಿರುವ ವೆಚ್ಚದ ಪ್ರಮಾಣವು ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕ ರಾಜ್ಯವು ಪ್ರಗತಿಯ ಹಾದಿಯಲ್ಲಿ ಹಿಂದೆ ಬೀಳುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಬಂದಿದಲ್ಲಿ, ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಟಿ.ಎಂ. ಮಂಜುನಾಥ (ರಾಜ್ಯ ಯೋಜನಾ ಮತ್ತು ಸಾಂಖ್ಯಿಕ ಹಣಕಾಸು ಮಂತ್ರಿಗಳು):–

ಅ) ಹೌದು. ಆದರೆ ಈ ಮಾತು ಆರನೆಯ ಮತ್ತು ಏಳನೇ ಪಂಚವಾರ್ಷಿಕ ಯೋಜನೆಗಳ ಕಾಲಾವಧಿಗೆ ಮಾತ್ರ ಸರಿ.

ಆ) ರಾಜ್ಯದ ಯೋಜನೆಗಾಗಿ ಸಂಪನ್ಮೂಲ ಕ್ರೋಢೀಕರಿಸಲು ಹಲವು ಕ್ರಮಗಳನ್ನು ಈಗಾಗಲೇ ತೆಗೆದುಕೊಳ್ಳಲಾಗಿದೆ. ಅಲ್ಲದೆ ರಾಜ್ಯದ ಪಾಲು ಎಲ್ಲಾ ರಾಜ್ಯಗಳ ಯೋಜನಾ ಮೊತ್ತದಲ್ಲಿ 1990–91 ರಿಂದ ಪ್ರತಿ ವರ್ಷ ಜಾಸ್ತಿಯಾಗುತ್ತಾ ಬಂದಿದೆ.

ಶ್ರೀ ವೈ.ಕೆ. ರಾಮಯ್ಯ:– ಸನ್ಮಾನ್ಯ ಅಧ್ಯಕ್ಷರೆ, ರಾಷ್ಟ್ರದ ಪಂಚವಾರ್ಷಿಕ ಯೋಜನೆಗಳಲ್ಲಿ ಮಾಡುತ್ತಿರತಕ್ಕಂಥ ವೆಚ್ಚದ ಪ್ರಮಾಣವನ್ನು ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ರಾಜ್ಯ ಪ್ರಗತಿಯ ಹಾದಿಯಲ್ಲಿ ಹಿಂದೆ ಬೀಳುತ್ತಿದೆ ಎನ್ನುವ ಮಾತನ್ನು ಸರ್ಕಾರ ಒಪ್ಪಿಕೊಂಡಿದೆ. ಸರ್ಕಾರದ ಈ ಮಾತು 6 ಮತ್ತು 7ನೇ ಪಂಚವಾರ್ಷಿಕ ಯೋಜನೆಗಳಿಗೆ ಮಾತ್ರ ಅನ್ವಯವಾಗುತ್ತದೆ. ಆರ್ಥಿಕ ಪ್ರಮಾಣದಲ್ಲಿ ರಾಜ್ಯ ಹಿಂದೆ ಬಿದ್ದಿದೆಯೆಂದು ಸರ್ಕಾರ ಒಪ್ಪಿಕೊಂಡ ನಂತರ ಇದನ್ನು ಸರಿಪಡಿಸುವುದಕ್ಕೆ ಸಂಪನ್ಮೂಲಗಳ ಕ್ರೋಢಿಕರಣಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆಯೆಂದು ಮಾನ್ಯ ಸಚಿವರು ಹೇಳುತ್ತಾರೆ. ಆದರೆ, ನಾನು ತಮ್ಮ ಮೂಲಕ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಕೇಳುತ್ತೇನೆ.

ಇದರ ಬಗ್ಗೆ ನಿರ್ದಿಷ್ಟವಾದಂಥ ಏನಾದರೂ ಕಾರ್ಯಕ್ರಮವಿದೆಯೆ ? ಎರಡನೆಯದಾಗಿ ಈ ಪ್ರಶ್ನೆಯಲ್ಲಿ ವೆಚ್ಚದ ಪ್ರಮಾಣ ಮತ್ತು ದರ ಇವೆರಡನ್ನೂ ಕೊಡುತ್ತೀರೆಂದು ನಾನು ಭಾವಿಸಿದ್ದೆ, ಆದರೆ ವೆಚ್ಚವನ್ನು ಮಾತ್ರ ಕೊಟ್ಟಿದ್ದೀರಿ ದರದ ಪ್ರಮಾಣವನ್ನು ಕೊಟ್ಟಿಲ್ಲ. 1992–93ರಲ್ಲಿ ನಿಗದಿ ಮಾಡಿದಂಥ ನಮ್ಮ ಯೋಜನಾ ವೆಚ್ಚ 1915 ಕೋಟಿ ರೂಪಾಯಿಗಳು. ಇದರಲ್ಲಿ ಖರ್ಚಾಗಿರತಕ್ಕ ಹಣವೆಷ್ಟು ? ಮತ್ತು ಸಾಧನೆ ಆಗಿರತಕ್ಕ ಶೇಕಡವಾರು ಗುರಿ ಎಷ್ಟು ? ದಯಮಾಡಿ ಇದರ ಬಗ್ಗೆ ಮಾಹಿತಿಯನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇದೇ ರೀತಿ ರಾಜ್ಯದ ಆರ್ಥಿಕ ಪ್ರಗತಿಯು ಕುಂಠಿತವಾಗಿರತಕ್ಕದ್ದು ಕೇವಲ ಪ್ರಮಾಣದಲ್ಲಿ ಮಾತ್ರವಲ್ಲ ಬಹುಶಃ ದರದ ಏರಿಕೆಯಲ್ಲಿಯೂ ಸಹರಾಜ್ಯ ಹಿಂದಕ್ಕೆ ಬಿದ್ದಿದೆ ಎಂದು ನನಗೆ ಗೊತ್ತಿರತಕ್ಕ ಅಂಕಿ ಅಂಶಗಳ ಪ್ರಕಾರವಾಗಿ

ನಂಬಿಕೊಂಡಿದ್ದೇನೆ. ಯೋಜನಾ ವೆಚ್ಚದ ಏರಿಕೆಯ ದರ ಎಷ್ಟು ಎಂಬ ಬಗ್ಗೆ ದಯಮಾಡಿ ಮಾನ್ಯ ಮಂತ್ರಿಯವರು ಅಂಕಿಅಂಶಗಳನ್ನು ಒದಗಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ್:– ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಹೇಳಿರತಕ್ಕಂಥ ಮಾತು ಕೆಲವು ಭಾಗ ತಾವು ಅಂಕಿಅಂಶಗಳನ್ನು ನೋಡಿದಾಗ ತಮಗೆ ಅನ್ನಿಸುತ್ತದೆ. 5ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಸರ್ಕಾರದ ಯೋಜನಾ ಕಾರ್ಯಕ್ರಮ ಶೇಕಡಾವಾರುನಲ್ಲಿ ಬಹಳ ಕಡಿಮೆ ಇತ್ತು. ಈಗ 8ನೇ ಪಂಚವಾರ್ಷಿಕ ಯೋಜನೆಯು ಬಂದ ಮೇಲೆ, ಉದಾಹರಣೆಗೆ 1989–90, 1991–92ರಿಂದ ತೆಗೆದುಕೊಂಡಾಗ ಏನು ಒಂದು ಆನ್ಯುಯಲ್ ಪ್ಲಾನ್ ಇಜ, ಹಾನು ಹೇಳತಕ್ಕದ್ದು 1990–91ರಲ್ಲಿ 1128 ಕೋಟಿ ರೂಪಾಯಿ ಯೋಜನಾ ವೆಚ್ಚವಿದ್ದರೆ ಈ ವರ್ಷ ಅಂದರೆ 1993–94ರಲ್ಲಿ 3025 ಕೋಟಿ ರೂಪಾಯಿಗಳು ಅಂದರೆ ದಕ್ಷಿಣದ ರಾಜ್ಯಗಳಿಗೆ ಹೋಲಿಸಿ ನೋಡಿದರೆ ನಮ್ಮದು 10.4 ಪರ್ಸೆಂಟ್ ಆಗುತ್ತದೆ. ಇದು ತಮಿಳುನಾಡಿನಲ್ಲಿ 7 ಪರ್‌ಸೆಂಟ್, ಆಂಧ್ರ ಪ್ರದೇಶದಲ್ಲಿ 6 ಪರ್ಸೆಂಟ್, ಕೇರಳದಲ್ಲಿ 3 ಪರ್ಸೆಂಟ್ ಮಹಾರಾಷ್ಟ್ರ ಬಹಳ ದೊಡ್ಡ ರಾಜ್ಯ ಅದರ ಸಂಪನ್ಮೂಲ 13 ಪರ್ಸೆಂಟ್ ಇದೆ, ಅದು ಜಾಸ್ತಿ ಇದೆ. ಆದುದರಿಂದ ಸನ್ಮಾನ್ಯ ಅಧ್ಯಕ್ಷರೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದೇನೆಂದರೆ ನಮಗೆ ಬರತಕ್ಕ ಕರವನ್ನು ಸರಿಯಾದ ರೀತಿಯಲ್ಲಿ ವಸೂಲಿ ಮಾಡುವುದು ಮತ್ತು ಸೋರುವಿಕೆಯನ್ನು ತಡೆಗಟ್ಟಿ ಜನಗಳ ಅಭಿವೃದ್ಧಿಗೋಸ್ಕರ ವೆಚ್ಚವನ್ನು ಮಾಡುವುದು.

ರಾಷ್ಟ್ರಮಟ್ಟದಲ್ಲಿಯೂ ಸಹ ನಮ್ಮ ಕರ್ನಾಟಕ ರಾಜ್ಯದ ಯೋಜನಾ ಗಾತ್ರ ಏನಿದೆ ಅದನ್ನು ಒಪ್ಪಿಕೊಂಡಿದ್ದಾರೆ, ಈ ಯೋಜನಾ ಗಾತ್ರವು ಸರಿಯಾಗಿದೆ, ಇದನ್ನು ಸರಿಯಾದ ರೀತಿಯಲ್ಲಿ ಮಾಡಿಕೊಂಡು ಬಂದಿದ್ದೀರಿ, ಹೆಚ್ಚು ಗಳಿಸಿದ್ದೀರಿ ಎನ್ನತಕ್ಕ ಮಾತನ್ನು ಕೇಂದ್ರ ಹೇಳಿದೆ. ಇದನ್ನು ಈ ಸಭೆಯ ಮಾನ್ಯ ಸದಸ್ಯರುಗಳಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ನನ್ನ ಪ್ರಶ್ನೆ ಏನೆಂದರೆ 3ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ರಾಜ್ಯದ ವೆಚ್ಚಕ್ಕಾಗಿ ನಿಗದಿ ಮಾಡತಕ್ಕದ್ದು ಸುಮಾರು 12,300 ಕೋಟಿ ಎಂದು ನನ್ನ ಭಾವನೆ. ಇದನ್ನು ಆಧಾರವಾಗಿಟ್ಟುಕೊಂಡು ಈಗ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಹೊರರಾಜ್ಯಗಳಿಗೆ ಹೋಲಿಸಿ ಕರ್ನಾಟಕದ ಪರಿಸ್ಥಿತಿ ಏನು ಎಂದು ಹೇಳಿದ್ದೇನೆಯೇ ಹೊರತು ಈ ವರ್ಷದ ವಾರ್ಷಿಕ ಯೋಜನೆಯನ್ನಲ್ಲ. ನನಗೆ ತಿಳಿದಮಟ್ಟಿಗೆ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ನಿಗದಿಯಾಗಿರತಕ್ಕ 12,300 ಕೋಟಿ ರೂಪಾಯಿಗಳು. ಇದನ್ನು ಆಧಾರವಾಗಿಟ್ಟುಕೊಂಡು ಶೇಕಡವಾರು ಎಷ್ಟು ಈ ರಾಜ್ಯ ಎಲ್ಲಿಗೆ ನಿಲ್ಲುತ್ತದೆ ಎನ್ನುವ ಬಗ್ಗೆ ಮಾಹಿತಿಯನ್ನು ಕೊಡಬೇಕೆಂದು ಕೇಳಿದ್ದೇನೆ.

ಶ್ರೀ ಟಿ.ಎಂ. ಮಂಜುನಾಥ್:– 8ನೇ ಪಂಚವಾರ್ಷಿಕ ಯೋಜನೆಯನ್ನು ತೆಗೆದುಕೊಂಡಾಗ ನಮ್ಮ ಸರ್ಕಾರ 7.7 ಪರ್ಸೆಂಟಿನ ಪ್ರಗತಿಯನ್ನು ಮಾಡಿದೆ.

ಶ್ರೀ ವೈ.ಕೆ. ರಾಮಯ್ಯ:– ಆಲ್ಲಿಯೂ ಕೂಡ ರಾಜ್ಯವು ಎಷ್ಟನೇ ಸ್ಥಾನದಲ್ಲಿ, ನಿಲ್ಲುತ್ತದೆ ಎನ್ನುವುದನ್ನು ಹೇಳಲಿಲ್ಲ.

ಶ್ರೀ ಟಿ.ಎಂ. ಮಂಜುನಾಥ್:– ಉತ್ತರ ಪ್ರದೇಶ ಒಂದನ್ನು ಬಿಟ್ಟರೆ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ರಾಜ್ಯ ಪ್ರಥಮ ಸ್ಥಾನವನ್ನು ಪಡೆಯುವುದರಲ್ಲಿ ಸಂಶಯವೇ ಇಲ್ಲ. ನಮ್ಮ ರಾಜ್ಯವನ್ನು ಮಾದರಿ ರಾಜ್ಯವನ್ನಾಗಿ ನಿರ್ಮಾಣ ಮಾಡಿದ್ದೇವೆ. ಆ ರೀತಿಯಲ್ಲಿ ನಾವು ಯೋಜನಾ ವೆಚ್ಚವನ್ನು ಮಾಡಿದ್ದೇವೆ. ಅದಕ್ಕೆ ನಮ್ಮ ಹಿರಿಯರಾದ ಮಾನ್ಯ ರಾಮಕೃಷ್ಣಹೆಗಡೆಯವರು

ಮುಖ್ಯಮಂತ್ರಿಗಳಾಗಿದ್ದಾಗ ಅವರೂ ಕೂಡ ಮಾಡಿದ್ದಾರೆ, ಅದಕ್ಕೆ ಅನುಗುಣವಾಗಿ ನಾವು ಮಾಡುತ್ತಿದ್ದೇವೆ ಮತ್ತು ಇದರಲ್ಲಿ ಪೂರ್ಣವಾದ ಯಶಸ್ಸನ್ನು ಪಡೆದಿದ್ದೇವೆ, ಜನರ ಅಭಿವೃದ್ಧಿಗೋಸ್ಕರ, ಜನರ ಸಹಕಾರಕ್ಕೋಸ್ಕರ, ದೇಶದ ಅಭಿವೃದ್ಧಿಗೋಸ್ಕರ ಯೋಜನೆಯನ್ನು ನಾವು ಪರಿಪೂರ್ಣವಾಗಿ ಮಾಡಿದ್ದೇವೆಂದು ಸರ್ಕಾರದ ಪರವಾಗಿ ಅವರಿಗೆ ಹೇಳುತ್ತಿದ್ದೇನೆ.

ಬೆಂಗಳೂರು ನಗರದಲ್ಲಿ ನಿವೇಶನಗಳ ಹಂಚಿಕೆ

98 (318) ಶ್ರೀ ಕೆ.ಎಂ. ಲಿಂಗಪ್ಪ (ರಾಮನಗರ):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಲಿ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಎಷ್ಟು ಜನರಿಗೆ ನಿವೇಶನಗಳನ್ನು ಕೊಡಬೇಕಾದ ಅವಶ್ಯಕತೆ ಇದೆ;

ಆ) ನಿವೇಶನಗಳನ್ನು ಕೋರಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಎಷ್ಟು ಜನರು ಅರ್ಜಿ ಸಲ್ಲಿಸಿದ್ದಾರೆ.;

ಇ) ಎಷ್ಟು ಜನರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿವೇಶನ ನೀಡಲು ಹಾಕಿಕೊಂಡಿರುವ ಯೋಜನೆಗಳಾವುವು;

ಈ) ಬೆಂಗಳೂರು ಹಾಗೂ ಸುತ್ತಮುತ್ತಲೂ ಇರುವ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಹೊರತುಪಡಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರೇ ನಿವೇಶನಗಳನ್ನು ಹಂಚಲು ಸಮರ್ಥರಿದ್ದಾರೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಂಗಳೂರು ನಗರದಲ್ಲಿ ಎಷ್ಟು ಜನರಿಗೆ ನಿವೇಶನದ ಅವಶ್ಯಕತೆ ಇದೆ ಎನ್ನುವ ಬಗ್ಗೆ ಸರ್ವೆ ಮಾಡಲಾಗುವುದಿಲ್ಲ.

ಆ) ನಿವೇಶನಗಳನ್ನು ಕೋರಿ ಒಟ್ಟು 86,988 ಜನರು ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಇ) ಸರ್ಕಾರವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಒಟ್ಟು 11 ಹೊಸ ಬಡಾವಣೆಗಳನ್ನು ನಿರ್ಮಿಸುವ ಯೋಜನೆಗಳಿಗೆ ಮಂಜೂರಾತಿ ನೀಡಿದೆ. ಈ ಬಡಾವಣೆಗಳಲ್ಲಿ ಒಟ್ಟು 8207 ಎಕರೆ 35 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು ನಿವೇಶನ ಹಂಚಲು ಕ್ರಮ ಕೈಗೊಳ್ಳಲಾಗುವುದು.

ಈ) ಹೌದು.

ಶ್ರೀ ಸಿ.ಎಂ. ಲಿಂಗಪ್ಪ:– ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮತ್ತು ಸುತ್ತಮುತ್ತಲಿರತಕ್ಕ ಗೃಹನಿರ್ಮಾಣ ಸಹಕಾರಿ ಸಂಘಗಳನ್ನು ಹೊರತುಪಡಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿವೇಶನಗಳನ್ನು ಹಂಚತಕ್ಕ ಸಾಮರ್ಥ್ಯ ಹೊಂದಿದ್ದಾರೆಯೇ ಎನ್ನತಕ್ಕ ಪ್ರಶ್ನೆಗೆ ಉತ್ತರದಲ್ಲಿ ಹೌದು ಎಂದು ಕೊಟ್ಟಿದ್ದಾರೆ. ಆದರಲ್ಲಿ ಇದು ಒಂದು ಜಟಿಲವಾದಂಥ ಸಮಸ್ಯೆ. ಬೆಂಗಳೂರು ಹಾಗೂ ಸುತ್ತಮುತ್ತಲೂ ಸುಮಾರು 100 ಗೃಹನಿರ್ಮಾಣ ಸಹಕಾರ ಸಂಘಗಳು ಕೆಲಸ ಮಾಡುತ್ತಿವೆ. ಸರ್ಕಾರ ಈಗಾಗಲೇ ಬಿ.ಡಿ.ಎ. ವತಿಯಿಂದ ಸುಮಾರು 8 ಸಾವಿರ ಎಕರೆ ಭೂಮಿಯನ್ನು ಅವರಿಗೆ ಸ್ವಾಧೀನಪಡಿಸಿಕೊಟ್ಟು ಅವರು ಬಡಾವಣೆಗಳನ್ನು ನಿರ್ಮಿಸುವುದಕ್ಕೆ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಈ